ಭೂ ನ್ಯಾಯ ಮಂಡಳಿಯ ಪ್ರಕರಣಗಳು

೧೦. ಶ್ರೀ ರಮಾನಾಥ ರೈ (ಬಂಟ್ವಾಳ).—ಮಾನ್ಯ ಕಂದಾಯ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂ ಮಸೂದೆ ಕಾನೂನಿನ ಪ್ರಕಾರ ಕೃಷಿ ಕೂಲಿ ಕಾರ್ಮಿಕರು ಕಲಂ ೩೮ (೩) ನಮೂನೆ ನಂ. ೨೮ರಲ್ಲಿ ಭೂ ನ್ಯಾಯ ಮಂಡಳಿಗೆ ಅರ್ಜಿ ಹಾಕಿದವರ ಸಂಖ್ಯೆ ಎಷ್ಟು ?

ಆ) ಅವುಗಳಲ್ಲಿ ತೀರ್ಮಾನವಾದ ಪ್ರಕರಣಗಳ ಸಂಖ್ಯೆ ಎಷ್ಟು ?

ಇ) ಭೂ ಮಾಲೀಕರ ಪ್ರಭಾವದಿಂದ ಇನ್ನೂ ಭೂ ನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸಲು ತಡೆಯೊಡ್ಡಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೆ ?

ಈ) ಹಾಗಿದ್ದಲ್ಲಿ ಅರ್ಜಿ ಸಲ್ಲಿಸಲು ಹೆಚ್ಚಿನ ಸಮಯಾವಕಾಶವನ್ನು ಕೊಡಲಾಗುವುದೇ ?

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಮಂತ್ರಿಗಳು).—

ಅ) ಸೆಕ್ಷನ್ ೩೮ (೧)(ಬಿ) ಮೇರೆಗೆ ಫಾರಂ ೨೮ರಲ್ಲಿ ಅರ್ಜಿಗಳನ್ನು ಸಲ್ಲಿಸಿದವರ ಸಂಖ್ಯೆ ೧೪೩೦೬. ಸೆಕ್ಷನ್ ೩೮(೩) ಮೇರೆಗೆ ಅರ್ಜಿ ಕೊಡುವುದಿಲ್ಲ.

ಆ) ೧೩೭೭೦.

ಇ) ಇಲ್ಲ.

ಈ) ಇಲ್ಲ.

ಶ್ರೀ ರಮಾನಾಥ ರೈ.—ಮಾನ್ಯ ಅಧ್ಯಕ್ಷರೇ, ಭೂ ಮಾಲೀಕರ ಪ್ರಭಾವದಿಂದ ಯಾವ ಪ್ರಕರಣವೂ ತಡೆಗಟ್ಟಿರುವುದಿಲ್ಲ ಎಂದು ಕರಾರುವಾಕ್ ಆಗಿ ಮಾನ್ಯ ಮಂತ್ರಿಗಳು ಅಧಿಕಾರಿಗಳು ಕೊಟ್ಟಿರುವ ಹೇಳಿಕೆ ಮೂಲಕ ಈ ಸದನದಲ್ಲಿ ಉತ್ತರ ಕೊಟ್ಟಿದ್ದಾರೆ. ಆದರೆ ನಮ್ಮ ಜಿಲ್ಲೆಯಲ್ಲಿ, ಸಾರ್ವಜನಿಕ ಜೀವನದಲ್ಲಿ ಪ್ರತಿನಿಧಿಗಳಾಗಿರತಕ್ಕ ನಾವುಗಳು ಕೆಲವು ಸಂದರ್ಭಗಳಲ್ಲಿ ಇಂಥಾ ಪ್ರಕರಣಗಳನ್ನು ನೋಡಿ ಅವುಗಳ ವಿರುದ್ಧ ಪೋಲೀಸ್ ಸ್ಟೇಷನ್‌ಗಳಲ್ಲಿ ಹಾಗೂ ಮತ್ತಿತರ ವೇದಿಕೆಗಳಲ್ಲಿ ಹೋರಾಟ ಮಾಡಬೇಕಾಗುತ್ತದೆ. ಇಂಥಾ ಪ್ರಕರಣಗಳು ನಮ್ಮ ಜಿಲ್ಲೆಯಲ್ಲಿ ಬಹಳಷ್ಟು ಇವೆ ಎಂಬುದನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದಕ್ಕೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆಂದು ಕೇಳುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಎಷ್ಟು ಅರ್ಜಿಗಳು ನಿಖಾಲೆಯಾಗಿವೆ ಎಂಬುದನ್ನು ಇಲ್ಲಿ ಹೇಳಲಾಗಿದೆ. ಭೂ ಮಾಲೀಕರ ತಡೆಯಿಂದ ತೊಂದರೆಯುಂಟಾಗಿರುವ ಬಗ್ಗೆ ಸರ್ಕಾರಕ್ಕೆ ಯಾವುದೇ ಮಾಹಿತಿ ಬಂದಿಲ್ಲ. ಅಂಥಾ ಪ್ರಕರಣಗಳು ತಮ್ಮ ಗಮನಕ್ಕೆ ಬಂದಿದ್ದರೆ ಅದನ್ನು ಸರ್ಕಾರಕ್ಕೆ ತಿಳಿಸಿದರೆ ಕ್ರಮ ತೆಗೆದುಕೊಳ್ಳಲಾಗುತ್ತದೆ. ಇನ್ನು ಅವಧಿ ಹೆಚ್ಚಿಸುವ ವಿಚಾರ ಸರ್ಕಾರದ ಮುಂದಿಲ್ಲ.

ಶ್ರೀ ರಮಾನಾಥ ರೈ.—ಭೂ ಮಾಲೀಕರ ತಡೆಯಿಂದ ತೊಂದರೆಗೆ ಒಳಗಾಗಿರುವ ಜನ ನಮ್ಮ ಜಿಲ್ಲೆಯಲ್ಲಿ ಇರುವುದರಿಂದ ಇನ್ನೂ ೬ ತಿಂಗಳು ಹೆಚ್ಚು ಅವಕಾಶವನ್ನು ಕೊಟ್ಟರೆ ಇಂತಹ ಪ್ರಕರಣಗಳನ್ನು ಇತ್ಯರ್ಥ ಮಾಡುವುದಕ್ಕೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಈಗಾಗಲೇ ನಾನು ಹೇಳಿದ್ದೇನೆ. ಇದುವರೆಗೆ ಬಂದಿದ್ದ ೨೫,೪೪೫ ಒಟ್ಟು ಅರ್ಜಿಗಳ ಪೈಕಿ ೨೪,೫೭೦ ಅರ್ಜಿಗಳು ವಿಲೇವಾರಿಯಾಗಿವೆ. ಇನ್ನು ೮೭೫ ಅರ್ಜಿಗಳು ವಿಲೇವಾರಿಯಾಗಬೇಕಾಗಿದೆ. ಅವುಗಳನ್ನು ವಿಲೇವಾರಿ ಮಾಡಲಾಗುವುದು. ಇನ್ನು ಅವಧಿ ವಿಸ್ತರಣೆ ಬಗ್ಗೆ ಹಿಂದಿನ ಸಂಗತಿಯನ್ನೇ ಹೇಳಬೇಕಾದರೆ ಅವಧಿಯನ್ನು ವಿಸ್ತರಿಸುವುದಕ್ಕೆ ಸರ್ಕಾರಕ್ಕೆ ಇಚ್ಛೆ ಇಲ್ಲ.

ಸುರತ್ಕಲ್‌ಗೆ ಪೋಲೀಸ್ ಠಾಣೆ ಸ್ಥಾಪನೆ ಬಗ್ಗೆ

೧೨೬. ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್‌ಗೆ ಪೋಲೀಸ್ ಠಾಣೆ ಹಾಗೂ ಕಾವೂರಿನಲ್ಲಿ ಔಟ್‌ಪೋಸ್ಟ್ ಠಾಣೆ ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ತೆಗೆದುಕೊಳ್ಳಲಿರುವ ಕ್ರಮಗಳೇನು ?